ಅವನ ಕಡೆ ನೋಡುತ್ತ, ಮುಗುಳ್ನಗುತ್ತ ಹ್ಯಾಟ್ ಅನ್ನು ಮೇಲೆತ್ತಿ ಹಿಡಿದಿದ್ದಾನೋ ಎನ್ನುವಂತೆ. ಈ ಹೊತ್ತಿನ ತನಕವೂ ಆ ಮನುಷ್ಯ ತನ್ನ ಹೆಂಡತಿಯನ್ನು ಅವನ ಇಚ್ಛೆ ಮತ್ತು ಮರ್ಜಿಯ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ.

ಅದೇ ಚಿತ್ರ! ಅದೇ ಶಾಶ್ವತ ನಗೆ! ಇನ್ನು ಸಹಿಸಲು ಸಾಧ್ಯವಿಲ್ಲ. ತಾನು ಎಲ್ಲಿಗೆ ಹೋದರೆ ಅಲ್ಲಿಗೆ ತನ್ನ ಹಿಂದೆ ಭೂತದ ಹಾಗೆ ಬೆನ್ನುಹತ್ತಿರುತ್ತೆ ಇದು. ಅದು ಅವನ ಕಣ್ಣೆದುರು ನಗುನಗುತ್ತ ಟೋಪಿಯನ್ನು ತಲೆ ಮೇಲಿಂದ ಎತ್ತಿಹಿಡಿದು, "ಈಗ ನಿನ್ನ ಸರದಿ. ಕೈ ಕಾಲು ಉದ್ದಕ್ಕೆ ಚಾಚಿಕೊಂಡು ಆರಾಮಾಗಿರು. ಈ ಕೊಠಡಿ ಒಂದು ಕಾಲದಲ್ಲಿ ನನ್ನ ಆಫೀಸ್ ರೂಂ ಆಗಿತ್ತು. ಈಗ ನಿನ್ನ ಕೆಮೆಸ್ಟ್ರಿ ಲ್ಯಾಬ್ ಆಗಿದೆ. ಬದುಕಿರುವ ವ್ಯಕ್ತಿಗೆ ಬದುಕು, ಸತ್ತವನಿಗೆ ಸಾವು! ಸುಖವಾಗಿರು. ನೆಮ್ಮದಿಯಿಂದ ಕೆಲಸ ಮಾಡು."

ಬಹುಶಃ ಅವನು ಬೆಡ್‌ರೂಮ್‌ಗೆ ಬಂದಿದ್ದಾನೆ. ಅಲ್ಲೂ ಸಹ ಸಿನೋರ್ ತಾದ್ದೇಯಿಯ ಮೂರ್ತಿ, ಮುಖದ ಮೇಲೆ ಕ್ರೂರ ನಗೆ ತಂದುಕೊಂಡು "ಬಾ, ಬಾ. ಹೇಗಿದ್ದೀ, ಚೆನ್ನಾಗಿದ್ದೀ ತಾನೆ? ನನ್ನ ಹೆಂಡತಿ ಹ್ಯಾಗೆ ಅನ್ನಿಸುತ್ತಾಳೆ ನಿನಗೆ? ನಾನು ಅವಳಿಗೆ ಒಳ್ಳೆಯ ಶಿಕ್ಷಣ ಕೊಟ್ಟಿದ್ದೀನೋ ಇಲ್ಲವೋ ಹೇಳು? ಬದುಕಿರುವವನಿಗೆ ಬದುಕು, ಸತ್ತಿರುವವನಿಗೆ ಸಾವು" ಎಂದು ಹೇಳುತ್ತ ಪ್ರತ್ಯಕ್ಷವಾಗುತ್ತದೆ.

"ಇಲ್ಲ, ಇಲ್ಲ, ಇನ್ನು ಸಹಿಸೋಕೆ ಸಾಧ್ಯವಿಲ್ಲ. ಮನೆಯ ಕೊಠಡಿಯಲ್ಲಿ ಆ ಮನುಷ್ಯ ವಿರಾಜಮಾನನಾಗಿದ್ದಾನೆ.'' ಬರ್ತೊಲಿನೊನಂಥ ಮುಗ್ಧ ಮನುಷ್ಯ ಅಸ್ಥಿರನಾದ; ಚಡಪಡಿಸತೊಡಗಿದ. ಹೆಂಡತಿಯ ಹತ್ತಿರ ತನ್ನ ಮಾನಸಿಕ ಸ್ಥಿತಿಯನ್ನು ಮುಚ್ಚಿಡುವ ಪ್ರಯತ್ನದಲ್ಲಿ ಅವನು ಯಶಸ್ವಿಯಾಗಲಿಲ್ಲ. ಕೊನೆಗೆ ತನ್ನ ಮನಸ್ಸಿನ ಭಾವನೆಯನ್ನು ಮುಚ್ಚಿಡುವ ಪ್ರಯತ್ನಮಾಡುವುದನ್ನೇ ಬಿಟ್ಟುಬಿಟ್ಟನು. ಹೆಂಡತಿಯ ಹಿಂದಿನ ನಡವಳಿಕೆಯಲ್ಲಿ ಗಲಿಬಿಲಿ ಉಂಟುಮಾಡುವ ಸಲುವಾಗಿ ವಿಕ್ಷಿಪ್ತನಾಗಲು ವಿಲಕ್ಷಣನೆನಿಸಲು ಯತ್ನಿಸಿದ. ಆದರೆ ಅದರಲ್ಲೂ ಯಶಸ್ವಿಯಾಗಲಿಲ್ಲ.

"ನಿಮ್ಮ ನಡವಳಿಕೆ ಥೇಟ್ 'ಇವರ' ಥರಾನೆ ಆಗ್ತಾ ಇದೆ" – ತುಸು ಆಜ್ಞಾಪಿಸುವ ಧಾಟಿಯಲ್ಲಿ ಲೀನಾ ಹೇಳತೊಡಗಿದಳು. ಮುಂದುವರಿದು, "ಅವರು ಕೂಡ ಕಿಂಚಿತ್ತೂ ಲೆಕ್ಕಾಚಾರದ ವ್ಯಕ್ತಿ ಆಗಿರಲಿಲ್ಲ; ಬಡಪಾಯಿ ತುಂಬಾ ಸಜ್ಜನರು!" ಎಂದಳು.

ತನ್ನ ಈ ಅವ್ಯವಸ್ಥಿತ ನಡವಳಿಕೆಯನ್ನು ಲೀನಾ ಒಳಗೊಳಗೇ ತುಂಬಾ ಪ್ರಶಂಸಿಸುತ್ತಾ ಇದ್ದಾಳೆ ಎಂದು ಬರ್ತೊಲಿನೋಗೆ ಬಹಳ ಬೇಗ ಗೊತ್ತಾಯಿತು. ತನ್ನ ಈ ಎಲ್ಲ ಕೃತ್ಯ, ಯಾರನ್ನು ತನ್ನ ಹೆಂಡತಿ ಲೀನಾಳ ಮನಸ್ಸಿನಿಂದಲೇ ತೊಲಗಿಸಿಬಿಡಲು ತಾನು ಬಯಸುತ್ತಿದ್ದಾನೋ ಅದೇ ವ್ಯಕ್ತಿಯ ನೆನಪನ್ನು ಅವಳಿಗೆ ತಂದುಕೊಡುತ್ತಿದೆ ಎಂದು ಅವನಿಗೆ ಅರ್ಥವಾಯಿತು.

ಅಂತಿಮವಾಗಿ ಒಂದು ಅತಿಕೆಟ್ಟ ಹಂಚಿಕೆ ಅವನ ಮನಸ್ಸಿನಲ್ಲಿ ಮೂಡಿತು.

ನಿಜ ಹೇಳಬೇಕೆಂದರೆ ಸೇಡು ತೀರಿಸಿಕೊಳ್ಳಬೇಕೆಂಬ ಉಮೇದು ಇದ್ದಷ್ಟು ಹೆಂಡತಿಗೆ ಮೋಸಮಾಡಬೇಕೆಂಬ ಇಚ್ಛೆ ಅವನಿಗೆ ಇರಲಿಲ್ಲ. ಅವನ ಆಕ್ರೋಶವಿದ್ದುದು ಅವನಿಗಿಂತ ಮೊದಲು ಅವನ ಹೆಂಡತಿಯ ಮೇಲೆ ತನ್ನ ಅಧಿಕಾರ ಸ್ಥಾಪಿಸಿ, ಸತ್ತ ನಂತರವೂ ಅವಳ ಮೇಲಿನ ತನ್ನ ಅಧಿಕಾರವನ್ನು ಬಿಟ್ಟುಕೊಡದ ಅದೇ ಆ ವ್ಯಕ್ತಿಯ ಮೇಲೆ. ಈ ದುಷ್ಟ ಹಂಚಿಕೆಯೆಲ್ಲಾ ಅವನದೇ ಸೃಷ್ಟಿ ಎಂಬ ಭಾವ ಬರ್ತೊಲಿನೋನ ಮೂರ್ಖ ಮತ್ತು ಮುಗ್ಧ ಮನಸ್ಸಿಗೆ ಬಂದುಬಿಟ್ಟಿತು.

ಈ ಒಂದು ಕೆಟ್ಟ ಯೋಚನೆಯನ್ನು ಅವನ ಮನಸ್ಸಿನಲ್ಲಿ ಸ್ವಲ್ಪ ಸ್ವಲ್ಪವಾಗಿ ಹರಿಯಬಿಟ್ಟವಳು ಅರ್ತೆನ್ಸಿಯಾಳೇ ಎಂಬುದನ್ನು ಅವನು ಯೋಚಿಸದಾದ. ಅವನಿನ್ನೂ ಅವಿವಾಹಿತನಾಗಿದ್ದಾಗ ಒದಿನಿಂದ ಅವನ ಆಸಕ್ತಿಯನ್ನು ಕದಲಿಸಲು ಅರ್ತೆನ್ಸಿಯಾಳು ಅನೇಕ ಸಲ ಪ್ರಯತ್ನಿಸಿದ್ದಳು. ಆದರೆ ಅದರಲ್ಲಿ ಅವಳಿಗೆ ಯಶಸ್ಸು ಸಿಕ್ಕಿರಲಿಲ್ಲ.